# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಸದಸ್ಯರ ಹೆಸರು** | : | **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)**<br>**(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **687** |
| **ಉತ್ತರಿಸಬೇಕಾದ ದಿನಾಂಕ** | : | **21.02.2024** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು; ಮತ್ತು ಹೊಸ ಚಿಕಿತ್ಸಾಲಯ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕೊಡಗು ಜಿಲ್ಲೆಯಲ್ಲಿ ಒಟ್ಟು 74 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅದರಲ್ಲಿ 22 ಪಶುಚಿಕಿತ್ಸಾಲಯಗಳಿರುತ್ತವೆ (ತಾಲ್ಲೂಕುವಾರು ಮಾಹಿತಿ **ಅನುಬಂಧ-1ರಲ್ಲಿ** ನೀಡಲಾಗಿದೆ).<br><br>2022-23ನೇ ಸಾಲಿನ ಆಯವ್ಯಯದಲ್ಲಿ 100 ನೂತನ ಪಶುಚಿಕಿತ್ಸಾಲಯಗಳನ್ನು ಹಂತ-ಹಂತವಾಗಿ ಮಂಜೂರು ಮಾಡಲು ಘೋಷಿಸಲಾಗಿದೆ.<br><br>ಈಗಾಗಲೇ ಮೊದಲ ಹಂತದಲ್ಲಿ 20 ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ ಇ-77 ಪಸಸೇ 2022, ದಿನಾಂಕ:17.05.2022 ರಂದು ಆದೇಶ ನೀಡಲಾಗಿದೆ.<br><br>ಅಲ್ಲದೇ ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ ಇ-77 ಪಸಸೇ 2024 (ಭಾಗ-2), ದಿನಾಂಕ:22.01.2024 ರನ್ವಯ 20 ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಪಶು ಚಿಕಿತ್ಸಾಲಯಗಳನ್ನು ಗುರುತಿಸುವ ಪ್ರಸ್ತಾವನೆ ಚಾಲ್ತಿಯಲ್ಲಿರುತ್ತದೆ. ಉಳಿದ ಪಶು ಚಿಕಿತ್ಸಾಲಯಗಳನ್ನು ಸಹ ಹಂತ-ಹಂತವಾಗಿ ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದ್ದು, ಮಡಿಕೇರಿ ತಾಲ್ಲೂಕಿನ ಕತ್ತಲೆಕಾಡು ಗ್ರಾಮದಲ್ಲಿ ಹೊಸ ಪಶುಚಿಕಿತ್ಸಾಲಯ ಪ್ರಾರಂಭಿಸುವ ಕುರಿತು ಆರ್ಥಿಕ ಇಲಾಖೆಯ ಸಹಮತಿ ದೊರೆತ ಕೂಡಲೇ ಆದ್ಯತೆ ಮೇರೆಗೆ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಕುರಿತು ಅಗತ್ಯ ಕ್ರಮ ವಹಿಸಲಾಗುವುದು. |
| ಆ) | ಸದರಿ ಚಿಕಿತ್ಸಾಲಯಗಳಲ್ಲಿ ಎಷ್ಟು ವೈದ್ಯಾಧಿಕಾರಿಗಳನ್ನು ನೇಮಕಗೊಳಿಸಲಾಗಿದೆ; ತಾತ್ಕಾಲಿಕ, ಗುತ್ತಿಗೆ ಆಧಾರ ಮತ್ತು ಪೂರ್ಣ ಪ್ರಮಾಣದ ಖಾಯಂ ಸರ್ಕಾರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು; | 22 ಪಶುಚಿಕಿತ್ಸಾಲಯಗಳ ಪೈಕಿ 16 ಪಶು ಚಿಕಿತ್ಸಾಲಯಗಳಲ್ಲಿ ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಜಿಲ್ಲೆಯಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಯಾವುದೇ ಪಶು ವೈದ್ಯರುಗಳು ಕಾರ್ಯನಿರ್ವಹಿಸುತ್ತಿಲ್ಲ.<br><br>**ತಾಲ್ಲೂಕುವಾರು ವಿವರ ಈ ಕೆಳಕಂಡತಿರುತ್ತದೆ.** |

| ತಾಲ್ಲೂಕು | ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯರ ಸಂಖ್ಯೆ |
|---|---|
| ಮಡಿಕೇರಿ | 7 |
| ವಿರಾಜಪೇಟೆ | 2 |
| ಪೊನ್ನಂಪೇಟೆ | 4 |
| ಸೋಮವಾರಪೇಟೆ | 1 |
| ಕುಶಾಲನಗರ | 2 |
| ಒಟ್ಟು | **16** |

| | | |
|---|---|---|
| ಇ) | ಸದರಿ ಜಿಲ್ಲೆಯಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು (ಮಾಹಿತಿಯನ್ನು ನೀಡುವುದು); ಹುದ್ದೆಗಳು ಖಾಲಿಯಿದ್ದಲ್ಲಿ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ತಾಲ್ಲೂಕುವಾರು ವಿವರ ನೀಡುವುದು) | ಕೊಡಗು ಜಿಲ್ಲೆಯಲ್ಲಿ 229 ಹುದ್ದೆಗಳು ಖಾಲಿ ಇರುತ್ತವೆ. ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br>ಇಲಾಖೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳಲ್ಲಿ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮೋದನೆ ನೀಡಿರುತ್ತದೆ. ವಿಶೇಷ ನೇರ ನೇಮಕಾತಿ ನಿಯಮದಡಿ ದಿನಾಂಕ:08-03-2022 ರಂದು ನೇಮಕಾತಿ ಸಂಬಂಧ ಅಧಿಸೂಚನೆ ಹೊರಡಿಸಲಾಗಿತ್ತು.<br>ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಯಂತೆ ಅರ್ಹತಾ ಪಟ್ಟಿ ತಯಾರಿಸಲಾಗಿತ್ತು. ಈ ನೇಮಕಾತಿ ಕುರಿತಂತೆ ಪಶುವೈದ್ಯಕೀಯ ಪದವೀಧರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 6662/2022 ರಂತೆ ದಾವೆಯನ್ನು ಹೂಡಿದ್ದು, ಉಚ್ಚ ನ್ಯಾಯಾಲಯವು ಈ ಪ್ರಕರಣವನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ವರ್ಗಾಯಿಸಿದರ ಹಿನ್ನೆಲೆಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ವಿಶೇಷ ನೇರ ನೇಮಕಾತಿ ನಿಯಮವನ್ನು ದಿನಾಂಕ:25-02-2022 ರಂದು ವಜಾಗೊಳಿಸಿರುತ್ತದೆ. ಈ ಮಧ್ಯೆ ಪಶುವೈದ್ಯಕೀಯ ಪದವೀಧರರು ನೇಮಕಾತಿ ನಿಯಮ ವಜಾಗೊಳಿಸಿರುವುದನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 16408/2023 ರಂತೆ ದಾವೆಯನ್ನು ಹೂಡಿರುತ್ತಾರೆ.<br>ಪ್ರಸ್ತುತ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದು, ಅಂತಿಮ ತೀರ್ಮಾನ ಬಂದ ನಂತರ ಮುಂದಿನ ಕ್ರಮವಹಿಸಲಾಗುವುದು.<br>ನೇರ ನೇಮಕಾತಿ ಮೂಲಕ ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಕೆ.ಇ.ಎ ಮೂಲಕ 216 ಅರ್ಹ ಅಭ್ಯರ್ಥಿಗಳನ್ನು ಆಯ್ಕೆಮಾಡಿದ್ದು, ಈಗಾಗಲೇ 197 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಬಾಕಿ ಇರುವ 19 ಅಭ್ಯರ್ಥಿಗಳ ಸಿಂಧುತ್ವ ಹಾಗೂ ನೈಜತೆ ಪ್ರಮಾಣ ಪತ್ರ ಬಂದ ನಂತರ ಬಾಕಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇರೆಗೆ ನೇಮಕಾತಿ ನೀಡುವ ಮೂಲಕ ಭರ್ತಿ ಮಾಡಲಾಗುವುದು.<br>ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಮತ್ತು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.<br>ಖಾಲಿ ಇರುವಂತಹ ಸಿಬ್ಬಂದಿ ಹುದ್ದೆಗಳನ್ನು ಮುಂಬಡ್ತಿ ಮುಖೇನ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br>ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮವಹಿಸಲಾಗುವುದು. |

**ಇ-ಪಸಂಮೀ 25 ಪಸಸೇ 2024**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ-1

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಕ್ರ ಸಂ | ಜಿಲ್ಲಾ ಪಾಲಿಕ್ಲಿನಿಕ್ | ಕ್ರ ಸಂ | ಪಶು ಆಸ್ಪತ್ರೆ | ಕ್ರ ಸಂ | ಪಶು ಚಿಕಿತ್ಸಾಲಯ | ಕ್ರ ಸಂ | ಪ್ರಾಥಮಿಕ ಪಶು ಚಿಕಿತ್ಸಾಲಯ | ಕ್ರ ಸಂ | ಸಂ.ಪ.ಚಿ. | ಒಟ್ಟು |
|---|---|---|---|---|---|---|---|---|---|---|---|---|
| 1 | 2 | | 3 | | 4 | | 5 | | 6 | | 7 | 8 |
| | 17 ಕೊಡಗು | | | | | | | | | | | |
| 1 | ಮಡಿಕೇರಿ | 1 | ಮಡಿಕೇರಿ | 1 | ನಾಪೋಕ್ಲು | 1 | ಬಲ್ಲಮಾವಟಿ | 1 | ಚೆಂಬು | | ಮಡಿಕೇರಿ | |
| | | | | 2 | ಭಾಗಮಂಡಲ | 2 | ಚೇರಂಬಾಣೆ | 2 | ಕಕ್ಕಬ್ಬೆ | | | |
| | | | | 3 | ಸಂಪಾಜೆ | 3 | ಮೂರ್ನಾಡು | 3 | ಮರಗೋಡು | | | |
| | | | | | | 4 | ಪಾರಣೆ | 4 | ಸಣ್ಣಪುಲಿಕೋಟು | | | |
| | | | | | | 5 | ಕರಿಕೆ | 5 | ಚಯಂಡಾಣೆ | | | |
| | | | | | | | | 6 | ಬೆಟಗೇರಿ | | | |
| | | | | | | | | 7 | ಮಕ್ಕಂದೂರು | | | |
| | ತಾಲ್ಲೂಕು ಒಟ್ಟು | | 1 | | 3 | | 5 | | 7 | | 1 | 17 |
| 2 | ಸೋಮವಾರಪೇಟೆ | | | 1 | ಸೋಮವಾರಪೇಟೆ | 1 | ಮಾದಾಪುರ | 1 | ಐಗೂರು | 1 | ಸೋಮವಾರ ಪೇಟೆ | |
| | | | | 2 | ಶನಿವಾರ ಸಂತೆ | 2 | ಗೌಡಹಳ್ಳಿ | 2 | ಅಂಕನಹಳ್ಳಿ | | | |
| | | | | 3 | ಕೊಡ್ಲಿಪೇಟೆ | 3 | ನಿಡ್ತ | 3 | ಗರ್ವಾಲೆ | | | |
| | | | | 4 | ಶಾಂತಳ್ಳಿ | 4 | ಆಲೂರು ಸಿದ್ದಾಪುರ | 4 | ಅಬ್ಬೂರು ಕಟ್ಟೆ | | | |
| | | | | | | | | 5 | ಗೋಣಿ ಮರೂರು | | | |
| | | | | | | | | 6 | ಬೇಳೂರು | | | |
| | | | | | | | | 7 | ತೋಳೂರು ಶೆಟ್ಟಳ್ಳಿ | | | |
| | ತಾಲ್ಲೂಕು ಒಟ್ಟು | | 0 | | 4 | | 4 | | 7 | | 1 | 16 |
| 3 | ವಿರಾಜಪೇಟೆ | | | 1 | ವಿರಾಜಪೇಟೆ | 1 | ಸಿದ್ದಾಪುರ | 1 | ಹೊಸೂರು | 1 | ವಿರಾಜಪೇಟೆ | |
| | | | | 2 | ಅಮ್ಮತ್ತಿ | 2 | ಪಾಲಿಬೆಟ್ಟ | 2 | ಬಿಟ್ಟಂಗಾಲ | | | |
| | | | | | | 3 | ಕಡಂಗ | 3 | ಕಣ್ಣಂಗಾಲ | | | |
| | | | | | | 4 | ಕಾಕೋಟು ಪರಂಬು | | | | | |
| | | | | | | 5 | ಕೆದಮಳ್ಳೂರು | | | | | |
| | | | | | | 6 | ಮಾಲ್ದಾರೆ | | | | | |
| | ತಾಲ್ಲೂಕು ಒಟ್ಟು | | 0 | | 2 | | 6 | | 3 | | 1 | 12 |

| | | | | | | | | | | | | |
|---|---|---|---|---|---|---|---|---|---|---|---|---|
| 4 | ಪೊನ್ನಂಪೇಟೆ | | | | ಪೊನ್ನಂಪೇಟೆ | 1 | ಬಿರುಣಾಣಿ | 1 | ಬಿ.ಶೆಟ್ಟಿಗೇರಿ | | | |
| | | | | | ತಿತಿಮತಿ | 2 | ಕುಟ್ಟ | 2 | ಹಳ್ಳಿಗಟ್ಟು | | | |
| | | | | | ಹುದಿಕೇರಿ | 3 | ಧನುಗಾಲ | 3 | ನಾಲ್ಕೇರಿ | | | |
| | | | | | ಬಾಳಲೆ | 4 | ಕಾನೂರು | 4 | ಹಾತೂರು | | | |
| | | | | | ಶ್ರೀಮಂಗಲ | | | 5 | ಬೆಸಗೂರು | | | |
| | | | | | ಗೋಣಿಕೊಪ್ಪಲು | | | 6 | ಕಿರಗೂರು | | | |
| | | | | | | | | 7 | ಕೋಟೂರು | | | |
| | | | | | | | | 8 | ಮಾಯಮುಡಿ | | | |
| | | | | | | | | 9 | ಮುಗುಟಗೇರಿ | | | |
| | ತಾಲ್ಲೂಕು ಒಟ್ಟು | | 0 | | 6 | | 4 | | 9 | | 0 | 19 |
| 5 | ಕುಶಾಲನಗರ | | | 1 | ಕುಶಾಲನಗರ | 1 | ಹೆಬ್ಬಾಲೆ | 1 | 7ನೇ ಹೊಸಕೋಟೆ | | | |
| | | | | 2 | ಸುಂಟಿಕೊಪ್ಪ | 2 | ಚೆಟ್ಟಳ್ಳಿ | 2 | ತೊರೆನೂರು | | | |
| | | | | | | 3 | ಶಿರಂಗಾಲ | 3 | ಹುದುಗೂರು | | | |
| | | | | | | | | 4 | ಅಭ್ಯತ್ ಮಂಗಲ | | | |
| | | | | | | | | 5 | ನಂಜಿರಾಯ ಪಟ್ಟಣ | | | |
| | ತಾಲ್ಲೂಕು ಒಟ್ಟು | | 0 | | 2 | | 3 | | 5 | | 0 | 10 |
| | **ಜಿಲ್ಲಾ ಒಟ್ಟು** | | **1** | | **17** | | **22** | | **31** | | **3** | **74** |

# ಅನುಬಂಧ-2

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು | ಭರ್ತಿ ಹುದ್ದೆಗಳು | ಖಾಲಿ ಹುದ್ದೆಗಳು | ಮಂಜೂರು ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ | ಮಂಜೂರು ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ | ಮಂಜೂರು ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ | ಮಂಜೂರು ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ | ಮಂಜೂರು ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ |
|---|---|---|---|---|---|---|---|---|---|---|---|---|---|---|---|---|---|---|---|
| ಜಿಲ್ಲೆಯ ಹೆಸರು:ಕೊಡಗು | | ತಾಲ್ಲೂಕುಗಳ ವಿವರ | | | | | | | | | | | | | | | | | |
| | | ಮಡಿಕೇರಿ | | | ಸೋಮವಾರಪೇಟೆ | | | ಕುಶಾಲನಗರ | | | ವಿರಾಜಪೇಟೆ | | | ಪೊನ್ನಂಪೇಟೆ | | | ಜಿಲ್ಲೆಯ ಒಟ್ಟು | | |
| 1 | ಉಪನಿರ್ದೇಶಕರು | 2 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 2 | 2 | 0 |
| 2 | ಮುಖ್ಯ ಪಶುವೈದ್ಯಾಧಿಕಾರಿ [ಆಡಳಿತ] | 2 | 1 | 1 | 1 | 0 | 1 | 0 | 0 | 0 | 1 | 0 | 1 | 0 | 0 | 0 | 4 | 1 | 3 |
| 3 | ಮುಖ್ಯ ಪಶುವೈದ್ಯಾಧಿಕಾರಿ | 2 | 2 | 0 | 2 | 0 | 2 | 1 | 1 | 0 | 2 | 1 | 1 | 1 | 1 | 0 | 8 | 5 | 3 |
| 4 | ಹಿರಿಯ ಪಶುವೈದ್ಯಾಧಿಕಾರಿಗಳು | 3 | 0 | 3 | 2 | 1 | 1 | 2 | 1 | 1 | 1 | 1 | 0 | 6 | 2 | 4 | 14 | 5 | 9 |
| 5 | ಪಶುವೈದ್ಯಾಧಿಕಾರಿಗಳು | 7 | 2 | 5 | 4 | 0 | 4 | 2 | 0 | 2 | 5 | 0 | 5 | 4 | 1 | 3 | 22 | 3 | 19 |
| 6 | ಸಹಾಯಕ ಆಡಳಿತಾಧಿಕಾರಿ | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 |
| 7 | ಜಾನುವಾರು ಅಭಿವೃದ್ಧಿ ಅಧಿಕಾರಿ | 2 | 1 | 1 | 1 | 1 | 0 | 1 | 0 | 1 | 1 | 0 | 1 | 0 | 0 | 0 | 5 | 2 | 3 |
| 8 | ಅಧೀಕ್ಷಕರು | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 |
| 9 | ಜಾನುವಾರು ಅಧಿಕಾರಿ | 2 | 1 | 1 | 3 | 1 | 2 | 2 | 0 | 2 | 1 | 1 | 0 | 6 | 1 | 5 | 14 | 4 | 10 |
| 10 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 8 | 3 | 5 | 8 | 4 | 4 | 7 | 2 | 5 | 5 | 0 | 5 | 9 | 6 | 3 | 37 | 15 | 22 |
| 11 | ಪ್ರಥಮ ದರ್ಜೆ ಸಹಾಯಕರು | 3 | 2 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 3 | 2 | 1 |
| 12 | ಹಿರಿಯ ವಾಹನ ಚಾಲಕರು | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 |
| 13 | ಪಶುವೈದ್ಯಕೀಯ ಪರೀಕ್ಷಕರು | 6 | 2 | 4 | 4 | 4 | 0 | 2 | 2 | 0 | 5 | 3 | 2 | 5 | 1 | 4 | 22 | 12 | 10 |
| 14 | ದ್ವಿತೀಯ ದರ್ಜೆ ಸಹಾಯಕರು | 3 | 3 | 0 | 1 | 1 | 0 | 0 | 0 | 0 | 1 | 1 | 0 | 0 | 0 | 0 | 5 | 5 | 0 |
| 15 | ಕ್ಷ ಕಿರಣ ಟೆಕ್ನೀಷಿಯನ್ | 1 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 1 |
| 16 | ಬೆರಳಚ್ಚುಗಾರರು | 1 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 1 |
| 17 | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | 13 | 2 | 11 | 9 | 1 | 8 | 6 | 0 | 6 | 6 | 1 | 5 | 9 | 0 | 9 | 43 | 4 | 39 |
| 18 | ವಾಹನ ಚಾಲಕರು | 2 | 0 | 2 | 1 | 0 | 1 | 0 | 0 | 0 | 1 | 0 | 1 | 0 | 0 | 0 | 4 | 0 | 4 |
| 19 | ಡಿ.ದರ್ಜೆ ನೌಕರರು | 32 | 3 | 29 | 22 | 3 | 19 | 16 | 5 | 11 | 18 | 1 | 17 | 30 | 2 | 28 | 118 | 14 | 104 |
| | ಒಟ್ಟು | **92** | **27** | **65** | **58** | **16** | **42** | **39** | **11** | **28** | **47** | **9** | **38** | **70** | **14** | **56** | **306** | **77** | **229** |